# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ನಿರ್ದೇಶಕರು ನಗರ ಯೋಜನೆ ಯಲಹಂಕ ವಲಯ ಬೆಂಗಳೂರು-92

ಸಂಖ್ಯೆ:ಬೃಬೆಂ.ಮ.ಪಾ/ಯ.ವ/ನಯೋವಿ/ಪ್ರಾ.ಪ್ರ.ಪ/23/2020-21 ದಿನಾಂಕ:25-02-2021

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ** :- ಯಲಹಂಕ ವಲಯ ನಗರ ಯೋಜನೆ ವಿಭಾಗದಿಂದ ಅನುಮೋದಿತವಾದ ಕಟ್ಟಡ ಪರವಾನಗಿ **ಎಲ್.ಪಿ.ಸಂಖ್ಯೆ:** BBMP.Ad.com.YLK/042/2020-21 ದಿನಾಂಕ:20-06-2020 ರ ಕಟ್ಟಡ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ** :-1. ನಿಮ್ಮ ಅರ್ಜಿ ಸ್ವೀಕರಿಸಿದ ದಿನಾಂಕ:06-11-2020

2. ಮುಖ್ಯ ಅಭಿಯಂತರರು (ಯಲಹಂಕ) ವಲಯ ರವರ ಅನುಮೋದನೆ ದಿನಾಂಕ:13-11-2020

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ, ಯಲಹಂಕ ಉಪನಗರ **ವಾರ್ಡ್ ನಂ.04, ಖಾತಾ ಸಂಖ್ಯೆ:1594/1556/1475, ನ್ಯಾಯಾಂಗ ಬಡಾವಣೆ** ಒಟ್ಟು 501.67 ಚ.ಮೀ ವಿಸ್ತೀರ್ಣವುಳ್ಳ ನಿವೇಶನದಲ್ಲಿ (S+G+2) ವಸತಿ ಕಟ್ಟಡ ನಿರ್ಮಿಸಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ಕೋರಿ ದಿನಾಂಕ: 06-11-2020 ರಂದು ನೀಡಿರುವ ಅರ್ಜಿ ಮೇರೆಗೆ **ದಿನಾಂಕ: 09-11-2020** ರಂದು ಸ್ಥಳ ಪರಿಶೀಲಿಸಲಾಗಿ ಯಲಹಂಕ ವಲಯ ನಗರ ಯೋಜನೆ ವಿಭಾಗದಿಂದ ಅನುಮೋದನೆಯಾದ ನಕ್ಷೆ **ಎಲ್.ಪಿ.ಸಂಖ್ಯೆ** Ad.com.YLK/042/2020-21, **ದಿನಾಂಕ:20-06-2020** ರ ಮೇರೆಗೆ ಸದರಿ ನಿವೇಶನದಲ್ಲಿ ಸ್ಟಿಲ್ಟ್ ಮಹಡಿಯಲ್ಲಿ ಆರ್.ಸಿ.ಸಿ ಕಂಬಗಳು ಅಳವಡಿಸಿರುವ ಕಾಮಗಾರಿ ಚಾಲನೆಯಲ್ಲಿದ್ದು, ಹಾಗೂ ಮಂಜೂರಾದ ನಕ್ಷೆಯಂತೆ ಕಟ್ಟಡವನ್ನು ನಿರ್ಮಿಸುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಕಟ್ಟಡ ಕೆಲಸ ಪ್ರಾರಂಭಿಸುವ **"ಪ್ರಾರಂಭಿಕ ಪ್ರಮಾಣ ಪತ್ರ"** ನೀಡಲಾಗಿದೆ. ಸದರಿ ಪ್ರಾರಂಭಿಕ ಪ್ರಮಾಣ ಪತ್ರದ **ಶುಲ್ಕ ರೂ.** 22,185/- ಡಿ.ಡಿ.ನಂ 353960 ದಿನಾಂಕ: 18-11-2020 **ಕೋಟೆಕ್ ಮಹಿಂದ್ರಾ ಬ್ಯಾಂಕ್** ಆ ರ ಡಿ.ಡಿಯನ್ನು ಅರ್ಜಿದಾರರು ಒದಗಿಸಿರುತ್ತಾರೆ. ಈ ಕಛೇರಿಯ ಅಂತರ್ಜಾಲ ತಂತ್ರಾಂಶದ ರಶೀದಿ ಸಂಖ್ಯೆ: **RE-ifms223-TP/0068/20-21 ದಿನಾಂಕ:24-11-2020** ರಂದು ಪಡೆದಿರುತ್ತದೆ. ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಕ ಪ್ರಮಾಣಪತ್ರ ನೀಡಲಾಗಿದೆ.

1. ಸದರಿ ಕಟ್ಟಡ ಕೆಲಸವನ್ನು ಕಡ್ಡಾಯವಾಗಿ ಅನುಮೋದಿತ ನಕ್ಷೆ ಹಾಗೂ ಕಟ್ಟಡ ಬೈಲಾ ಪ್ರಕಾರ ಯಾವುದೇ ಬದಲಾವಣೆ ಹಾಗೂ ಒತ್ತುವರಿಗಳಿಲ್ಲದೆ ನಿಯಮಾನುಸಾರ ನಿರ್ವಹಿಸತಕ್ಕದ್ದು.
2. ಸದರಿ ಕಟ್ಟಡದ ತಳಪಾಯದ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತ ತಲುಪಿದಾಗ ಅಥವಾ ಆರ್.ಸಿ.ಸಿ. ಕಂಬ ಅಳವಡಿಸುವ ಹಂತದಲ್ಲಿ ಸದರಿ ಕೆಲಸದ ಪ್ರಗತಿ ಬಗ್ಗೆ ಮಹಾನಗರ ಪಾಲಿಕೆಗೆ ವರದಿ ಸಲ್ಲಿಸುವುದು. ಆಗಿಂದಾಗ್ಗೆ ಕಟ್ಟಡವನ್ನು ಅನುಮೋದಿತ ನಕ್ಷೆಯನುಸಾರ ಹಾಗೂ ಕಡ್ಡಾಯವಾಗಿ ಬೈಲಾ ಪ್ರಕಾರ ನಿರ್ಮಾಣ ಕಾರ್ಯ ನಿರ್ವಹಿಸಲಾಗುತ್ತಿದೆಯೇ? ಎಂಬುದರ ಬಗ್ಗೆ ಪರಿಶೀಲಿಸಲು ಮಹಾನಗರ ಪಾಲಿಕೆಯು ಅಧಿಕಾರವನ್ನು ಹೊಂದಿರುತ್ತದೆ.
3. ಅರ್ಜಿದಾರರು ತಮ್ಮ ಸ್ವತ್ತಿನಲ್ಲಿಯೇ ಕಟ್ಟಡ ನಿರ್ಮಾಣದ ಕೆಲಸಗಾರರಿಗೆ ತಾತ್ಕಾಲಿಕವಾಗಿ ಶೆಡ್ ಮತ್ತು ಶೌಚಾಲಯವನ್ನು ಅಕ್ಕಪಕ್ಕದ ಸ್ವತ್ತಿನವರಿಗೆ ತೊಂದರೆಯಾಗದಂತೆ ನಿರ್ಮಿಸುವುದು.
4. ಸದರಿ ಕಟ್ಟಡಕ್ಕೆ **Leay and Collection of and Surcharge** ಗಳನ್ನು ಪಾವತಿಸಿಕೊಳ್ಳುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:12204/2020 ರ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

24/2/21

ಸಹಾಯಕ ನಿರ್ದೇಶಕರು
ನಗರ ಯೋಜನೆ
ಬಿಬಿಎಂಪಿ, ಯಲಹಂಕ ವಲಯ

ಸಹಾಯಕ ನಿರ್ದೇಶಕರು
ನಗರ ಯೋಜನೆ - ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಯಲಹಂಕ ವಲಯ, ಬ್ಯಾಟರಾಯನಪುರ, ಬೆಂಗಳೂರು - 92.

ರವರಿಗೆ,
ಶ್ರೀ.ನ್ಯಾಯಮೂರ್ತಿ ಬಿ.ಎನ್.ಮಲ್ಲಿಕಾರ್ಜುನ
ಖಾತಾ ಸಂಖ್ಯೆ: ಸಂಖ್ಯೆ: 1594/1556/1475,
ನ್ಯಾಯಾಂಗ ಬಡಾವಣೆ
ವಾರ್ಡ ಸಂಖ್ಯೆ:04, ಬೆಂಗಳೂರು